ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**ಸಂಕೇತ ಸಂಖ್ಯೆ : 95-K**

**Code No. : 95-K**

**B**

**CCE RR**
**Revised & Unrevised**

**Question Paper Serial No. 90**

ಇಲ್ಲಿಂದ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಭಾಷಾಂತರ / Kannada Version)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 21. 09. 2020 ] [ Date : 21. 09. 2020

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ರಷ್ಯಾದ ಜನತೆಯ ಮೇಲೆ ತಮ್ಮ ಸಿದ್ಧಾಂತದ ಮೂಲಕ ಪ್ರಭಾವ ಬೀರಿದ ವ್ಯಕ್ತಿ

   (A) ಸ್ಟ್ಯಾಲಿನ್

   (B) ಕಾರ್ಲ್ ಮಾರ್ಕ್ಸ್

   (C) ರೂಸ್ಸೋ

   (D) ಅಬ್ರಾಹಂ ಲಿಂಕನ್

2. ಜನಸಂಖ್ಯೆಯನ್ನು ನಿಯಂತ್ರಿಸಲು ಭಾರತ ಜಾರಿಗೆ ತಂದ ಯೋಜನೆ

   (A) ಕುಟುಂಬ ಯೋಜನೆ

   (B) ಕಲ್ಯಾಣ ಯೋಜನೆ

   (C) ಮಹಿಳಾ ಕಲ್ಯಾಣ ಯೋಜನೆ

   (D) ಮಕ್ಕಳ ಕಲ್ಯಾಣ ಯೋಜನೆ

3. ಬೌದ್ಧ ಧರ್ಮದ ಸ್ಥಾಪಕರು

   (A) ಮಹಾವೀರ

   (B) ಅಶೋಕ

   (C) ಗೌತಮ ಬುದ್ಧ

   (D) ಬಸವಣ್ಣ

4. 'ಕ್ಯಾಸ್ಟ್ ಆ್ಯಂಡ್ ರೇಸ್ ಇನ್ ಇಂಡಿಯಾ' ಪುಸ್ತಕದ ಕರ್ತೃ

   (A) ಮಹಾತ್ಮ ಗಾಂಧೀಜಿ

   (B) ನೆಹರೂ

   (C) ದಯಾನಂದ ಸರಸ್ವತಿ

   (D) ಜಿ.ಎಸ್. ಗುರ್ರೆ

5. ಮಾವೊತ್ಸೆತುಂಗನು ಅಧ್ಯಕ್ಷನಾಗಿದ್ದ ದೇಶ

(A) ಚೀನಾ

(B) ಬಾಂಗ್ಲಾದೇಶ

(C) ಜಪಾನ್

(D) ಉತ್ತರ ಕೊರಿಯಾ

6. ಕೇರಳದಲ್ಲಿ ಧರ್ಮ ಪರಿಪಾಲನ ಚಳುವಳಿಯನ್ನು ಆರಂಭಿಸಿದವರು

(A) ಪೆರಿಯಾರ್

(B) ಶ್ರೀನಾರಾಯಣ ಗುರು

(C) ಗಾಂಧೀಜಿ

(D) ಶಂಕರಾಚಾರ್ಯ

7. ವರದಕ್ಷಿಣೆ ನಿಷೇಧ ಕಾನೂನು ಜಾರಿಗೆ ಬಂದ ವರ್ಷ

(A) 1971

(B) 1970

(C) 1961

(D) 1951

8. ವೇರಿಯರ್ ಎಲ್ವಿನ್‌ರವರ ಪ್ರಕಾರ 'ಬುಡಕಟ್ಟುಗಳನ್ನು ಹೊರಗಿನವರಿಂದ ರಕ್ಷಿಸಲು ಮಾಡಬೇಕಾಗಿರುವುದು'

(A) ಪ್ರತ್ಯೇಕವಾಗಿಡಬೇಕು

(B) ಶಿಕ್ಷಣ ನೀಡಬೇಕು

(C) ಆಧುನೀಕರಣಗೊಳಿಸಬೇಕು

(D) ಮುಖ್ಯವಾಹಿನಿಗೆ ತರಬೇಕು

9. ಮೂಕನಾಯಕ ಪತ್ರಿಕೆಯನ್ನು ಆರಂಭಿಸಿದವರು

   (A) ಬಾಲಗಂಗಾಧರ್ ತಿಲಕ್

   (B) ಮಹಾತ್ಮಾ ಗಾಂಧೀಜಿ

   (C) ನೆಹರೂ

   (D) ಡಾ. ಬಿ.ಆರ್. ಅಂಬೇಡ್ಕರ್

10. 1962 ರಲ್ಲಿ ಭಾರತದ ಮೇಲೆ ಯುದ್ಧ ಸಾರಿದ ರಾಷ್ಟ್ರ

   (A) ಪಾಕಿಸ್ತಾನ

   (B) ಚೀನಾ

   (C) ಬಾಂಗ್ಲಾದೇಶ

   (D) ಶ್ರೀಲಂಕಾ

II. 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

$5 \times 1 = 5$

| ***A* ಪಟ್ಟಿ** | ***B* ಪಟ್ಟಿ** |
|---|---|
| (A) ಬಾರ್ದೋಲಿ ಸತ್ಯಾಗ್ರಹ | (i) ಕಬೀರ್ ದಾಸ್ |
| (B) ಖೇಡಾ ಸತ್ಯಾಗ್ರಹ | (ii) ಆರ್ಯ ಸಮಾಜ |
| (C) ಬ್ರಹ್ಮ ಸಮಾಜ | (iii) ಸರ್ದಾರ್ ವಲ್ಲಭಭಾಯಿ ಪಟೇಲರು |
| (D) ಪರಮಹಂಸ ಸಭೆ | (iv) ಮಹಾತ್ಮಾ ಗಾಂಧೀಜಿ |
| (E) ವೇದಗಳಿಗೆ ಹಿಂತಿರುಗಿ | (v) ರಾಜಾ ರಾಮ್‌ಮೋಹನ್ ರಾಯ್ |
| | (vi) ಪ್ರಾರ್ಥನ ಸಮಾಜ |
| | (vii) ಸತ್ಯಶೋಧಕ ಸಮಾಜ |

III. **ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 15 × 1 = 15

12. ಕಿಂಗ್ಸ್‌ಲೇ ಡೇವಿಸ್‌ನ ಪ್ರಕಾರ ಸಾಮಾಜಿಕ ಬದಲಾವಣೆಯನ್ನು ವ್ಯಾಖ್ಯಾನಿಸಿ.

13. ಸಾಮಾಜಿಕ ಬದಲಾವಣೆ ಅನಿಶ್ಚಿತ. ಏಕೆ ?

14. ಅನಕ್ಷರತೆ ಸಾಮಾಜಿಕ ಪರಿವರ್ತನೆಗೆ ಅಡ್ಡಿಯಾಗುತ್ತದೆ. ಹೇಗೆ ?

15. 1950 ರ ಯೋಜನಾ ನೀತಿಯ ಮುಖ್ಯ ಗುರಿಯೇನು ?

16. ಪ್ರಾದೇಶಿಕ ಅಸಮತೋಲನ ಎಂದರೇನು ?

17. ಜಾತಿ ಎಂಬ ಪದವು ಹೇಗೆ ಬಂದಿದೆ ?

18. 1954 ರ ವಿಶೇಷ ವಿವಾಹ ಕಾಯ್ದೆಯನ್ನು ಏಕೆ ಜಾರಿಗೊಳಿಸಲಾಗಿದೆ ?

19. ಪಕ್ಕಾ ಆಹಾರವೆಂದರೇನು ?

20. ಮಿಲ್ಲರ್ ವರದಿಯನ್ನು ಆಧರಿಸಿ ಬ್ರಾಹ್ಮಣೇತರರಿಗೆ ಮೀಸಲಾತಿ ನೀಡಿದ ಮೈಸೂರಿನ ದೊರೆಯನ್ನು ಹೆಸರಿಸಿ.

21. ಮಹಿಳೆಯರ ಸ್ಥಾನಮಾನದ ಬಗ್ಗೆ ಪಂಡರಿನಾಥ ಪ್ರಭುರವರ ಅಭಿಪ್ರಾಯವೇನು ?

22. ಎಸ್.ಎನ್.ಡಿ.ಟಿ. ಮಹಿಳಾ ವಿಶ್ವವಿದ್ಯಾನಿಲಯದ ಸ್ಥಾಪಕರು ಯಾರು ?

23. ಭಾರತದ ಮೊದಲ ಶಿಕ್ಷಕಿ ಯಾರು ?

24. ಹಿಂದೂ ಉತ್ತರಾಧಿಕಾರ ಕಾಯ್ದೆಯನ್ನು ಏಕೆ ಜಾರಿಗೊಳಿಸಲಾಗಿದೆ ?

25. ಮಹಿಳಾ ಸಬಲೀಕರಣವನ್ನು ಏಕೆ ಜಾರಿಗೆ ತರಲಾಗಿದೆ ?

26. ಭಾರತದ ಸಿಲಿಕಾನ್ ವ್ಯಾಲಿ ಎಂದು ಕರೆಯಲ್ಪಡುವ ನಗರ ಯಾವುದು ?

IV. **ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** 14 × 2 = 28

27. ಆಧುನಿಕ ಶಿಕ್ಷಣ ಒಂದು ಔದ್ಯೋಗಿಕ ಸಾಧನೆ. ಸಮರ್ಥಿಸಿ.

28. ಕೈಗಾರಿಕೀಕರಣವು ಒಂದು ದೇಶದ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ ?

29. ಆಧುನೀಕರಣದ ಮುಖ್ಯ ಉದ್ದೇಶಗಳೇನು ?

30. ಸಾಂಪ್ರದಾಯಿಕ ಮನಃಸ್ಥಿತಿಯು ಪ್ರಗತಿ ಮತ್ತು ಸಾಮಾಜಿಕ ಬದಲಾವಣೆಗಳ ವಿಳಂಬಕ್ಕೆ ಹೇಗೆ ಕಾರಣವಾಗಿದೆ ?

31. ಡಾ. ಬಿ.ಆರ್. ಅಂಬೇಡ್ಕರ್‌ರವರು ಅಸ್ಪೃಶ್ಯರ ಹಕ್ಕುಗಳನ್ನು ಹೇಗೆ ಎತ್ತಿಹಿಡಿದಿದ್ದಾರೆ ?

32. ಪ್ರತಿಭಟನಾತ್ಮಕ ಚಳುವಳಿಗಳ ಗುಣಲಕ್ಷಣಗಳೇನು ?

33. 1882 ರ ಹಂಟರ್ ಶಿಕ್ಷಣ ಆಯೋಗವು ಮಹಿಳೆಯರಿಗೆ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಅವಕಾಶವನ್ನು ಒದಗಿಸಿತ್ತು. ಸ್ಪಷ್ಟೀಕರಿಸಿ.

34. ವಿವಾಹಕ್ಕೆ ಸಂಬಂಧಿಸಿದ ಸ್ವಾತಂತ್ರ್ಯ ಪೂರ್ವದ ಕಾನೂನುಗಳನ್ನು ಪಟ್ಟಿಮಾಡಿ.

35. ಆಧುನಿಕತೆಯು ಬುಡಕಟ್ಟು ಸಮುದಾಯಗಳ ಮೇಲೆ ದುಷ್ಪರಿಣಾಮಗಳನ್ನು ಬೀರಿವೆ. ಸ್ಪಷ್ಟೀಕರಿಸಿ.

36. ಬುಡಕಟ್ಟುಗಳಿಗಿರುವ ಇತರೆ ಹೆಸರುಗಳನ್ನು ತಿಳಿಸಿ.

37. ದಾಬರ್ ಆಯೋಗದ ಶಿಫಾರಸ್ಸುಗಳನ್ನು ವಿವರಿಸಿ.

38. 40 ವರ್ಷಗಳ ಯೋಜನೆಯ ಮುಖ್ಯ ಉದ್ದೇಶಗಳೇನು ?

39. ಅಭಿವೃದ್ಧಿಯಲ್ಲಿ ಸಮೂಹ ಮಾಧ್ಯಮಗಳ ಪಾತ್ರವನ್ನು ವಿವರಿಸಿ.

40. ಸಮೂಹ ಮಾಧ್ಯಮಗಳ ಪ್ರಾಕಾರಗಳನ್ನು ಉದಾಹರಣೆಗಳೊಂದಿಗೆ ತಿಳಿಸಿ.

V. **ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

41. ಸಾಮಾಜಿಕ ಬದಲಾವಣೆಯ ಗುಣಲಕ್ಷಣಗಳೇನು ?

42. ಭಾರತದಲ್ಲಿ ಸಾಮಾಜಿಕ ಅಸಮಾನತೆ ಹೆಚ್ಚುತ್ತಿದೆ. ಏಕೆ ?

43. ಭಾರತೀಯ ಸಮಾಜವನ್ನು ಅಧ್ಯಯನ ಮಾಡಲು ಬಯಸುವ ವ್ಯಕ್ತಿ ಜಾತಿ ಪದ್ಧತಿಯನ್ನು ಅರ್ಥಮಾಡಿಕೊಳ್ಳಬೇಕು. ವಿವರಿಸಿ.

44. ಮಹಿಳೆಯರ ಪ್ರಗತಿಗಾಗಿ ಬ್ರಿಟಿಷರ ಅವಧಿಯಲ್ಲಿ ಸ್ಥಾಪನೆಯಾದ ಮಹಿಳಾ ಸಂಘಟನೆಗಳನ್ನು ಹೆಸರಿಸಿ.

45. ಬುಡಕಟ್ಟುಗಳ ಅಭಿವೃದ್ಧಿಗೆ ಸಂವಿಧಾನದಲ್ಲಿರುವ ಸವಲತ್ತುಗಳನ್ನು ವಿವರಿಸಿ.

46. ಸಮೂಹ ಮಾಧ್ಯಮಗಳಿಂದಾಗುವ ದುಷ್ಪರಿಣಾಮಗಳನ್ನು ತಿಳಿಸಿ.

VI. **ಕೆಳಗಿನ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** $1 \times 4 = 4$

47. ಸಾಮಾಜಿಕ ಚಳುವಳಿಯ ಉದ್ದೇಶಗಳನ್ನು ವಿವರಿಸಿ.